
ಡಿಸೆಂಬರ್ 13, 2001 ಉದಯವಾಣಿ

ಶೇಷಾದ್ರಿಪುರಂ ಶಿಕ್ಷಣ ದತ್ತಿ

(ಒಂದನೇ ಪುಟದಿಂದ)



ಆರನೇ ತರಗತಿಯಿಂದ ಇಂಗ್ಲಿಷ್ ಅಥವಾ ಕನ್ನಡ ಮಾಧ್ಯಮವನ್ನು ವಿದ್ಯಾರ್ಥಿಗಳೇ ಆಯ್ಕೆ ಮಾಡಿಕೊಳ್ಳಬಹುದು. ಹೈಸ್ಕೂಲಿನಲ್ಲಿಯೂ .ಕನ್ನಡ ಮಾಧ್ಯಮದ ಒಂದೊಂದು ವಿಭಾಗಗಳಿವೆ. ಹೈಸ್ಕೂಲಿನಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಹುಡುಗರಿಗೆ ಪ್ರತ್ಯೇಕ ಶಾಲೆಗಳಿವೆ.

ಗ್ರಾಮೀಣ ಪ್ರದೇಶದಿಂದ ಬೆಂಗಳೂರಿಗೆ ಬರುವ ರಾಜಕಾರಣಿಗಳಿಗೆ ತಮ್ಮ ಮಕ್ಕಳನ್ನು ಸೇರಿಸಲು ಮೊದಲು ಕಣ್ಣಿಗೆ ಬೀಳುವುದೇ ಶೇಷಾದ್ರಿಪುರಂ ಕಾಲೇಜು ಎಂದು ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿಯಾಗಿರುವ ಗೀತಾ ಹೇಳುತ್ತಾರೆ.

ಶಾಲೆಯಲ್ಲಿ ಅತ್ಯುತ್ತಮವಾದ ಬೋಧನಾ ವ್ಯವಸ್ಥೆಯಿದೆ. ಆದ ಕಾರಣವೇ ಈ ಶಿಕ್ಷಣ ಸಂಸ್ಥೆಯು ರ್‍ಯಾಂಕ್ ಗಳಿಕೆಯಲ್ಲಿಯೂ ಮುಂದಿದೆ. ಪಠ್ಯೇತರ ಚಟುವಟಿಕೆಯಲ್ಲಿ ಸದಾ ಮುಂದು. ಶಾಲೆಯು ಭವ್ಯವಾದ ನಾಲ್ಕು ಅಂತಸ್ತುಗಳ ಕಟ್ಟಡವನ್ನು ಹೊಂದಿದೆ. ಸುಸಜ್ಜಿತವಾದ ಗ್ರಂಥಾಲಯವಿದೆ. ವಿಶಾಲವಾದ ಬಯಲು ರಂಗಮಂಟಪವಿದೆ. ಒಳ್ಳೆಯ ಪೀಠೋಪಕರಣ ಹೊಂದಿದೆ. ಶೈಕ್ಷಣಿಕ ಕಾರ್ಯಕ್ರಮಗಳನ್ನು ಟಿ.ವಿ. ಮೂಲಕ ತೋರಿಸುವ ವ್ಯವಸ್ಥೆಯಿದೆ. ಕಂಪ್ಯೂಟರ್, ಸಂಗೀತ, ಕ್ರಾಫ್ಟ್, ಡ್ರಾಯಿಂಗ್‌ಗಳನ್ನು ಕಲಿಸಲಾಗುತ್ತಿದೆ. ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ. ಒಟ್ಟಿನಲ್ಲಿ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಎಲ್ಲಾ ಸೌಲಭ್ಯಗಳನ್ನು ಶಾಲೆಯ ಆಡಳಿತ ಮಂಡಳಿ ಒದಗಿಸಿಕೊಡುತ್ತಿದೆ.

ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಯಾವುದೇ ಶುಲ್ಕ ಇಲ್ಲ. ಜೊತೆಗೆ ಸಮವಸ್ತ್ರ ನೀಡಲಾಗುತ್ತಿದೆ. ಇದೇ ಕೆಲವೊಮ್ಮೆ ಸಂಶಯಕ್ಕೆ ಕಾರಣವಾಗುತ್ತದೆ. 'ನಮ್ಮ ಜನರಿಗೆ ಉಚಿತ ಅಂದರೆ ಏನೋ ಗುಮಾನಿ' ಎಂದು ಹೇಳುವ ಡಬ್ಲ್ಯು.ಪಿ. ಕೃಷ್ಣ ಶಿಕ್ಷಣದ ಗುಣಮಟ್ಟ ಮತ್ತು ಶಿಸ್ತಿನ ವಿಚಾರದಲ್ಲಿ ನಮ್ಮ ಶಾಲೆ ಎಂದೂ ರಾಜಿಯಾಗುವುದಿಲ್ಲ ಎನ್ನುತ್ತಾರೆ.

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ, ಪ್ರಕಾಶ ಪಡುಕೋಣೆ, ಶ್ಯಾಮಲಾ ಜಿ. ಭಾವೆ ಸೇರಿದಂತೆ ಅನೇಕ ಪ್ರತಿಭಾವಂತರು ಶೇಷಾದ್ರಿಪುರ ಕಾಲೇಜಿನಲ್ಲಿ ಓದಿದ್ದಾರೆ. ಮಾಜಿ ಮೇಯರ್ ಆಗಿದ್ದ ಕೆ. ನಂಜಪ್ಪನವರು ಕಳೆದ ಇಪ್ಪತ್ತೈದು ವರ್ಷಗಳಿಂದ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರಾಗಿ ದುಡಿಯುತ್ತಿದ್ದಾರೆ.

ಅರ್ಧ ಶತಮಾನಕ್ಕೂ ಹಿಂದೆ ಆಗಿನ್ನೂ ಮಹಿಳೆಯರು ಮನೆಯ ಹೊಸ್ತಿಲನ್ನು ದಾಟುವ ಧೈರ್ಯ ಮಾಡುತ್ತಿರಲಿಲ್ಲ. ಅಂಥ ಕಾಲದಲ್ಲಿ ಶೇಷಾದ್ರಿಪುರಂನ ಕೆಲವು ಸುಸಂಸ್ಕೃತ ಮಹಿಳೆಯರು 'ಸ್ತ್ರೀ ಸಮಾಜ'ವೆಂಬ ಸಂಘವೊಂದನ್ನು ಕಟ್ಟಿ ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸಿದರು. ಇದರ ಆಶ್ರಯದಲ್ಲಿ ಪ್ರಾಥಮಿಕ ಶಾಲೆಯನ್ನು ತೆರೆದರು. ಇದಕ್ಕೆ ಸೀತಮ್ಮ ಎಂಬ ಉದಾತ್ತ ಮಹಿಳೆ ಪ್ರೇರಕ ಶಕ್ತಿಯಾಗಿ ನಿಂತರು. ಸ್ತ್ರೀ ವಿದ್ಯಾಭ್ಯಾಸಕ್ಕೆ ಒತ್ತು ನೀಡಿದರು. ಇಂದು ಅದು ಬೃಹತ್ತಾಗಿ ಬೆಳೆದಿದೆ. ಅನೇಕ ಜ್ಞಾನ ಶಾಖೆಗಳಾಗಿ ಹರಡಿದೆ. ಆದರೂ ಅಂದಿನ ಆದರ್ಶ ಇಂದಿಗೂ ಉಳಿಸಿಕೊಂಡು ಬಂದಿದೆ. ■

ಸಂಯುಕ್ತ ಕರ್ನಾಟಕ

"Sumyukatha Karnataka " Dated: 10-12-2001.

ಆಯ್ಕೆ: ಶೇಷಾದ್ರಿಪುರಂ ಶಿಕ್ಷಣ ದತ್ತಿಗೆ ಅಧ್ಯ
ಕ್ಷರಾಗಿ ಕೆ.ಎಂ. ನಂಜಪ್ಪ ಆಯ್ಕೆಯಾಗಿ
ದ್ದಾರೆ.ಎನ್.ಆರ್. ಪಂಡಿತಾರಾಧ್ಯ, ಡಬ್ಲ್ಯು.ಎಚ್.
ಅನಿಲ್ ಕುಮಾರ್ (ಉಪಾಧ್ಯಕ್ಷರು), ಟಿ.ಎಸ್.
ಹಂಜಾರಪ್ಪ (ಖಜಾಂಚಿ), ಡಬ್ಲ್ಯು.ಪಿ. ಕೃಷ್ಣ
(ಪ್ರಧಾನ ಕಾರ್ಯದರ್ಶಿ), ಎ.ಆರ್. ಶ್ರೀನಿವಾ
ಸಯ್ಯ (ಜಂಟಿ ಕಾರ್ಯದರ್ಶಿ) ಹಾಗೂ ಆರ್.
ಕೃಷ್ಣ ಲೆಕ್ಕಾಧಿಕಾರಿಯಾಗಿ ಆಯ್ಕೆಯಾಗಿದ್ದಾರೆ.

ಅಂಗವಿಕಲನ ಉದ್ಯೋಗಕ್ಕೇ ಸಂಚಕಾರ ತಂದ ವೆಂಕಟಪ್ಪನವರ ಹುಕೂಮತ್!

ಕನ್ನಡಪ್ರಭ ವಾರ್ತೆ, ಬೆಂಗಳೂರು,ನ.29

ವಿಧಾನಸಭಾ ಅಧ್ಯಕ್ಷ ಎಂ.ವಿ.ವೆಂಕಟಪ್ಪ ಅವರ ಹುಕೂಮತ್ ವಿಧಾನಸಭೆಯಿಂದ ಆಚೆಯೂ ನಡೆಯುತ್ತದೆಯೇ?

ಕೋಲಾರ ಜಿಲ್ಲೆ ರಾಜೇಂದ್ರನಹಳ್ಳಿ ಗ್ರಾಮ ಪಂಚಾಯ್ತಿ ಗ್ರಂಥಾಲಯದಲ್ಲಿ ಮೇಲ್ವಿಚಾರಕರಾಗಿ ಮೂರು ತಿಂಗಳಿಂದ ಸೇವೆ ಸಲ್ಲಿಸುತ್ತಿದ್ದ ಅಂಗವಿಕಲ ಎಸ್.ಶ್ರೀನಿವಾಸಗೌಡ ಅವರು ವೆಂಕಟಪ್ಪ ಅವರ ಆದೇಶದಿಂದಾಗಿ ಕೆಲಸ ಕಳೆದುಕೊಂಡಿದ್ದಾರೆ. ಶೇ.90 ರಷ್ಟು ಅಂಗವಿಕಲರಾಗಿರುವ ಶ್ರೀನಿವಾಸ್ ಅವರು ಕೆಲಸ ಕಳೆದುಕೊಳ್ಳುವ ಮೂಲಕ ಜೀವನಾಧಾರ ನೆಲೆಯನ್ನೇ ಕಳೆದುಕೊಂಡಿದ್ದಾರೆ.

ಇವರ ನೇಮಕ ಆದೇಶ ರದ್ದು ಮಾಡಲು ನೀಡಿರುವ ಕಾರಣ ಎಂದರೆ, ಮೂರು ತಿಂಗಳಿಂದ ಕೆಲಸಕ್ಕೆ ಹಾಜರಾಗಿಲ್ಲ ಎಂಬುದು.

ಆದರೆ, ಶ್ರೀನಿವಾಸ್ ಅವರು ತಾವು ಮೂರು ತಿಂಗಳಿಂದ ಕೆಲಸ ಮಾಡಿದ್ದಕ್ಕೆ ಹಾಜರಿ ಪುಸ್ತಕದಲ್ಲಿ ಸಹಿ ಹಾಕಿರುವುದನ್ನು ತೋರಿಸುತ್ತಾರೆ. ಕೆಲಸ ಮಾಡಿದ ಮೂರು ತಿಂಗಳೂ ಗೌರವ ಸಂಭಾವನೆಯೂ (ತಿಂಗಳಿಗೆ 750 ರುಪಾಯಿ) ಸಿಕ್ಕಿಲ್ಲ.

ಗುರುವಾರ ಪ್ರೆಸ್‌ಕ್ಲಬ್‌ಗೆ ತೆವಳಿಕೊಂಡೇ ಬಂದಿದ್ದ ಶ್ರೀನಿವಾಸಗೌಡರು ಪತ್ರಿಕಾಗೋಷ್ಠಿಯಲ್ಲಿ ವಿನಾಕಾರಣ ತಮಗಾಗಿರುವ ಅನ್ಯಾಯವನ್ನು ತೋಡಿಕೊಂಡರು.



ಸರ್ಕಾರ ತಮ್ಮನ್ನು ನೇಮಕ ಮಾಡಿಕೊಳ್ಳುವಾಗ, ಎಲ್ಲಾ ದಾಖಲೆ ಪತ್ರಗಳ ಜತೆಗೆ ಒಂದು ಸಾವಿರ ರುಪಾಯಿ ಮೌಲ್ಯದ ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಭದ್ರತಾ ಠೇವಣಿ ರೂಪದಲ್ಲಿ ಗ್ರಂಥಾಲಯ ಇಲಾಖೆಗೆ ನೀಡಲಾಗಿತ್ತು. ಇಲಾಖೆ ಮೇ ತಿಂಗಳಲ್ಲಿ ನೇಮಕಾತಿ ಪತ್ರ ನೀಡಿತ್ತು. ತಮ್ಮನ್ನು ಕೆಲಸದಿಂದ ತೆಗೆದು ಹಾಕಲು ರಾಜಕೀಯ ಕೈವಾಡವೇ ಕಾರಣ ಎಂದು ಹೇಳಿರುವ ಅವರು, ಈ ಬಗ್ಗೆ ವಿಧಾನಸಭಾಧ್ಯಕ್ಷ ವೆಂಕಟಪ್ಪ ಅವರನ್ನು ಕಂಡು ತಿಳಿಸಿದಾಗ, 'ನೋಡೋಣಪ್ಪ' ಎಂದರು. ಈಗ ನನ್ನ ಜಾಗಕ್ಕೆ ಬೇರೆಯವರನ್ನು ನೇಮಕ ಮಾಡಿದ್ದಾರೆ.

ಕೋಲಾರ ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಯವರು ಜೂನ್ 21 ರಂದು ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕರಿಗೆ ಬರೆದ ಪತ್ರ ಹೀಗಿದೆ–

'ರಾಜೇಂದ್ರಹಳ್ಳಿ ಗ್ರಾಮ ಪಂಚಾಯ್ತಿ ಗ್ರಂಥಾಲಯದ ಮೇಲ್ವಿಚಾರಕ ನೇಮಕಾತಿಯ ಸಂಪೂರ್ಣ ಕಡತದೊಂದಿಗೆ ತಮ್ಮಲ್ಲಿ ಚರ್ಚಿಸಿದ್ದು, ಈ ಕುರಿತು ವಿಧಾನಸಭಾ ಅಧ್ಯಕ್ಷ ಎಂ.ವಿ. ವೆಂಕಟಪ್ಪ ಅವರನ್ನು ಸಂಜೆ ಅವರ ನಿವಾಸದಲ್ಲಿ ಖುದ್ದಾಗಿ ಸಂಪರ್ಕಿಸಿ ನೇಮಕಾತಿ ವಿಷಯ ತಿಳಿಸಿದಾಗ, ಸದ್ಯಕ್ಕೆ ನೇಮಕಾತಿ ತಡೆ ಹಿಡಿಯುವಂತೆ ಸೂಚಿಸಿದರು. ಆ ಬಗ್ಗೆ ನಿಮ್ಮೊಂದಿಗೆ (ನಿರ್ದೇಶಕರು) ಮಾತನಾಡುವುದಾಗಿ ಹೇಳಿದರು. ಮುಂದಿನ ಕ್ರಮದ ಬಗ್ಗೆ ತಮ್ಮಿಂದ ಸೂಕ್ತ ನಿರ್ದೇಶನ ನಿರೀಕ್ಷಿಸಿದ್ದೇನೆ'.

ಸೆಪ್ಟಂಬರ್ 6 ರಂದು ಕೋಲಾರ ಮುಖ್ಯ ಗ್ರಂಥಾಲಯಾಧಿಕಾರಿಗಳು ಶ್ರೀನಿವಾಸಗೌಡ ಅವರಿಗೆ ಜ್ಞಾಪನ ಪತ್ರ ಕಳುಹಿಸಿ, ವಿಧಾನಸಭಾಧ್ಯಕ್ಷ ವೆಂಕಟಪ್ಪ ಮತ್ತು ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಆದೇಶದ ಮೇಲೆ ನೇಮಕಾತಿ ರದ್ದು ಮಾಡಿದ್ದಾಗಿ ತಿಳಿಸಿದೆ.

ಕಡು ಬಡತನದಲ್ಲಿರುವ ಶ್ರೀನಿವಾಸ್ ಅವರ ಕುಟುಂಬ ಈಗ ಕಂಗಾಲಾಗಿದೆ. ವೃದ್ಧ ತಂದೆ ತಾಯಿ, ಎರಡು ಎಕರೆ ಬರಡು ಭೂಮಿ ಮಾತ್ರ ಈಗ ಆಸರೆ. ಮುಂದೆ ಏನು ಮಾಡಬೇಕು ಎಂದು ದಿಕ್ಕು ತೋಚದ ಸ್ಥಿತಿಯಲ್ಲಿದ್ದಾರೆ.

ಕಂಗಾಲಾಗಿದ್ದ ಶ್ರೀನಿವಾಸ್ ಅವರ ನೆರವಿಗೆ ಬಂದವರು ಡಬ್ಲ್ಯು.ಪಿ.ಕೃಷ್ಣ ಅವರು. ಮುಖ್ಯಮಂತ್ರಿ, ವಿಧಾನಸಭಾಧ್ಯಕ್ಷ, ಲೋಕಾಯುಕ್ತ ಮತ್ತು ಜಿಲ್ಲಾ ಮಂತ್ರಿಯವರಿಗೆ ಮನವಿ ಸಲ್ಲಿಸಲು. ನತದೃಷ್ಟನ ಕೂಗನ್ನು ವಿಧಾನಸೌಧಕ್ಕೆ ಮುಟ್ಟಿಸುವ ಪ್ರಯತ್ನಕ್ಕೆ ನೆರವಾಗಿದ್ದಾರೆ.

■ **ವಿಧಾನಸಭಾಧ್ಯಕ್ಷರ ಸ್ಪಷ್ಟನೆ:** ನೇಮಕಾತಿ ರದ್ದುಪಡಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಹೆಸರು ಎಳೆದು ತಂದಿರುವುದು ರಾಜಕೀಯ ದುರುದ್ದೇಶ ಇರಲೂಬಹುದು ಎಂದು ವಿಧಾನಸಭಾಧ್ಯಕ್ಷ ಎಂ.ವಿ.ವೆಂಕಟಪ್ಪ ಅವರು 'ಕನ್ನಡಪ್ರಭ'ಕ್ಕೆ ತಿಳಿಸಿದ್ದಾರೆ. 'ಅಂಗವಿಕಲ ಶ್ರೀನಿವಾಸಗೌಡ ಅವರ ನೇಮಕಾತಿ ರದ್ದು ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನೇಮಕ ರದ್ದು ಮಾಡಿ ಎಂದೂ ತಿಳಿಸಿಲ್ಲ. ಅಲ್ಲಿನ ಗ್ರಾಮ ಪಂಚಾಯ್ತಿ ತೀರ್ಮಾನದ ಮೇರೆಗೆ ನೇಮಕ ರದ್ದುಪಡಿಸಿರಬಹುದು ಎಂದು ಸ್ಪಷ್ಟಪಡಿಸಿದರು.

ಪುಟ 2 ಪ್ರಜಾವಾಣಿ ಮಂಗಳವಾರ 31ನೇ ಜುಲೈ 2001

ಪದಾಧಿಕಾರಿಗಳ ಆಯ್ಕೆ

ಗಾಂಧಿ ಶಾಂತಿ ಪ್ರತಿಷ್ಠಾನದ ಪದಾಧಿಕಾರಿಗಳ ಆಯ್ಕೆಯಾಗಿದ್ದು ವಿವರ ಇಂತಿದೆ : ಎಂ.ಎಚ್.ಕೌಜಲಗಿ (ಅಧ್ಯಕ್ಷ), ಸತ್ಯವ್ರತ (ಉಪಾಧ್ಯಕ್ಷ), ಎಚ್.ಆರ್.ದಾಸೇಗೌಡ (ಕಾರ್ಯದರ್ಶಿ), ಡಬ್ಲ್ಯೂ.ಪಿ.ಕೃಷ್ಣ (ಕೋಶಾಧ್ಯಕ್ಷ).

ಕಾಲೇಜು ಕಟ್ಟಡಕ್ಕೆ ಎರಡು ಸಹಾಯಾರ್ಥ ನಾಟಕ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಏ. ೨೦- ನಗರದ ಚೌಡಯ್ಯ ಮೆಮೊರಿಯಲ್ ಹಾಲ್‌ನಲ್ಲಿ ಇದೇ ತಿಂಗಳ 29ರಂದು ಸಂಜೆ 4 ರಿಂದ 8ರವರೆಗೆ ಖ್ಯಾತ ರಂಗಕರ್ಮಿ ವೈ.ಜಿ. ಮಹೇಂದ್ರ ಅವರ ನಿರ್ದೇಶನದಲ್ಲಿ ಎರಡು ತಮಿಳು ನಾಟಕಗಳು ಪ್ರದರ್ಶಗೊಳ್ಳಲಿವೆ.

ಸದಾಶಿವನಗರ ಯುವಕ ಸಂಘ ಈ ನಾಟಕ ಪ್ರದರ್ಶನ ಏರ್ಪಡಿಸಿದ್ದು, ಇದರಿಂದ ಸಂಗ್ರಹವಾಗಲಿರುವ ಹಣವನ್ನು ಸದಾಶಿವನಗರ ಪದವಿಪೂರ್ವ ಕಾಲೇಜಿನ ಸ್ವಂತ ಕಟ್ಟಡ ನಿರ್ಮಿಸಲು ವಿನಿಯೋಗಿಸಲಾಗುವುದು ಎಂದು ಸಂಘದ ಅಧ್ಯಕ್ಷ ಡಬ್ಲ್ಯೂ.ಪಿ. ಶಿವಕುಮಾರ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಇಂದು ಮಾತನಾಡುತ್ತಿದ್ದ ಅವರು ಈಗಾಗಲೇ ಸಂಜಯನಗರದಲ್ಲಿ ಸದಾಶಿವನಗರ ಪದವಿಪೂರ್ವ ಕಾಲೇಜು ಅಸ್ತಿತ್ವದಲ್ಲಿದೆಯಾದರೂ ಸ್ವಂತ ಕಟ್ಟಡ ಹೊಂದಿಲ್ಲ. ಅದು ನರ್ಸರಿ ಶಾಲೆಯಲ್ಲಿ ನಡೆಯುತ್ತಿದ್ದು ಈ ನಿಟ್ಟಿನಲ್ಲಿ ಕಾಲೇಜು ಕಟ್ಟಡ ನಿರ್ಮಿಸಲು ಸಂಜಯನಗರ ಸ್ಥಳ ಗುರುತಿಸಲಾಗಿದೆ. ಈ ಪ್ರದರ್ಶನದಿಂದ ಸಂಗ್ರಹವಾಗುವ ಹಣವನ್ನು ಕಟ್ಟಡ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುವುದು ಎಂದರು.

ಈ ಕಾಲೇಜಿನಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ಯಾವುದೇ ವಂತಿಗೆ ಸ್ವೀಕರಿಸದೆ ಉಚಿತವಾಗಿ ಪ್ರವೇಶ ನೀಡಲಿದ್ದು ಇದು ಖಾಸಗಿ ಕಾಲೇಜುಗಳಿಗೆ ಮಾದರಿಯಾಗಿದೆ ಎಂದು ತಿಳಿಸಿದರು.

ಶೇ. 30ರಷ್ಟು ಕಾಲೇಜಿನಲ್ಲಿ ಉಚಿತ ಶಿಕ್ಷಣ ದೊರೆಯಲಿದೆ ಎಂದ ಅವರು ಸಂಘದಿಂದ ಇನ್ನು ಹಲವಾರು ಸಾರ್ವಜನಿಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಎಂದರು.

ನಾಟಕ ಪ್ರದರ್ಶನದಿಂದ ನಾಲ್ಕು ಲಕ್ಷ ರೂ.ಗಳು ಸಂಗ್ರಹವಾಗುವ ಗುರಿ ಹೊಂದಿರುವುದಾಗಿ ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಕಾರ್ಯಕಾರಿಣಿ ಸದಸ್ಯ ಡಬ್ಲ್ಯು.ಪಿ. ಕೃಷ್ಣ, ಉಪಾಧ್ಯಕ್ಷ ಕೆ. ಅಂಜನ್ ಕುಮಾರ್, ಕಾರ್ಯದರ್ಶಿ ಎಸ್. ವೀರಭದ್ರಯ್ಯ ಇತರರು ಭಾಗವಹಿಸಿದ್ದರು.



ಪೂಡೇ ಪ್ರತಿಷ್ಠಾನ ಪ್ರಶಸ್ತಿ ಪುರಸ್ಕೃತ ಗಾಂಧಿವಾದಿ ಎಚ್.ಎಸ್.ದೊರೆಸ್ವಾಮಿ ಅವರನ್ನು ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಮಾಜಿ ಸಚಿವ ಹಾರನಹಳ್ಳಿ ರಾಮಸ್ವಾಮಿ ಅವರು ಪ್ರಶಸ್ತಿ ವಿತರಿಸಿದರು. ಮಾಜಿ ಮಹಾಪೌರರಾದ ಜಿ.ನಾರಾಯಣ ಅವರು ಭಾಗವಹಿಸಿದ್ದರು.

ಸಂಜೆವಾಣಿ ಬುಧವಾರ 2ನೇ ಫೆಬ್ರವರಿ 2000 ಪುಟ 3

ಭಾರತ-ಶ್ರೀಲಂಕಾ ವಿನಿಮಯ ಕಾರ್ಯಕ್ರಮ

ಬೆಂಗಳೂರು, ಫೆ. ೨- ಭಾರತ ಮತ್ತು ಶ್ರೀಲಂಕ ಯುವಕರ ನಡುವಣ ಸಂಬಂಧವನ್ನು ಬಲಪಡಿಸುವ ಉದ್ದೇಶದಿಂದ ಸಮಾಜ ಸೇವಕ ಹಾಗೂ ರಾಜ್ಯ ಯುವ ಪ್ರಶಸ್ತಿ ವಿಜೇತ ಡಬ್ಲ್ಯು.ಪಿ. ಕೃಷ್ಣ ಅವರು ಭಾರತ-ಶ್ರೀಲಂಕಾ ಯುವ ವಿನಿಮಯ ಕಾರ್ಯಕ್ರಮ 2000ದಲ್ಲಿ ಭಾಗವಹಿಸುತ್ತಿದ್ದಾರೆ.

ಸದಾಶಿವನಗರ ಯೂತ್ ಅಸೋಸಿಯೇಷನ್‌ನ ಸಂಸ್ಥಾಪಕರಾಗಿರುವ ಕೃಷ್ಣ ಅವರು ಯುವಕರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಇವರ ನೇತೃತ್ವದಲ್ಲಿ 15 ಜನ ಯುವಕರ ತಂಡ ಫೆಬ್ರವರಿ 14ರಂದು 12 ದಿನಗಳ ಕಾಲ ಭೇಟಿಗಾಗಿ ಶ್ರೀಲಂಕಾಕ್ಕೆ ತೆರಳಲಿದ್ದಾರೆ.

ಜಾತಿ, ಭಾಷಾ ಭೇದ ತೊಡೆದು ಹಾಕಲು ಯುವಕರಿಗೆ ಕರೆ

ಕನ್ನಡಪ್ರಭ ವಾರ್ತೆ

ಬೆಂಗಳೂರು, ಜ.5

ಜಾತಿ, ಧರ್ಮ, ಭಾಷೆಗಳ ನಡುವಿನ ಮೇಲು, ಕೀಳು ಭಾವನೆಗಳನ್ನು ವೈಮನಸ್ಯವನ್ನೂ ತೊಡೆದು ಹಾಕಲು ಯುವಜನರು ಶ್ರಮಿಸಬೇಕೆಂದು ಸಂಸತ್ ಸದಸ್ಯ ಸಿ. ನಾರಾಯಣ ಸ್ವಾಮಿ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ಶೇಷಾದ್ರಿಪುರಂ ಸಂಜೆ ಕಾಲೇಜಿನ ಬೆಳ್ಳಿ ಹಬ್ಬದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡುತ್ತಿದ್ದರು.

ಜಾತಿ, ಧರ್ಮಗಳು ಕೇವಲ ಹುಟ್ಟಿನಿಂದ ಬರುತ್ತವೆ. ಜಾತಿ, ಧರ್ಮಗಳ ನಡುವೆ ಅಂತರವನ್ನು ತೊಡೆದು ಹಾಕಲು ವಿದ್ಯಾರ್ಥಿಗಳು, ಯವ ಜನರು ಜಾತ್ಯತೀತ ಮನೋಭಾವ ಬೆಳೆಸಿಕೊಳ್ಳಬೇಕೆಂದು ಅವರು ನುಡಿದರು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಭಾರತೀಯ ವಿದ್ಯಾಭವನದ ನಿರ್ದೇಶಕ ಮತ್ತೂರು ಕೃಷ್ಣಮೂರ್ತಿ, ವಿದ್ಯಾರ್ಥಿ ಜೀವನ ಅತಿ ಪ್ರಮುಖ ಘಟ್ಟ. ವಿದ್ಯೆ ಕಲಿಯುವ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಿ ಎಂದು ಕರೆ ನೀಡಿದರು.

ರಾಜಕಾರಣಿಗಳು ಸ್ವಾರ್ಥ ಸಾಧನೆಗಾಗಿ ತಮ್ಮನ್ನು ಉಪಯೋಗಿಸಿ ಕೊಳ್ಳದಂತೆ ನೋಡಿಕೊಳ್ಳಬೇಕು ಎಂದೂ ಅವರು ಎಚ್ಚರಿಸಿದರು.

ಬೆಳ್ಳಿಹಬ್ಬದ . ಕಾರ್ಯಕ್ರಮವನ್ನು ಉದ್ಘಾಟಿಸಿದ ಆದಿಚುಂಚನಗಿರಿಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಆಶೀರ್ವದಿಸಿದರು.

ಕಾಲೇಜಿನ ಮಾಜಿ ಪ್ರಾಂಶುಪಾಲರುಗಳನ್ನು ಮತ್ತು ಬೋಧಕ ಹಾಗೂ ಬೋಧಕೇತರ ವರ್ಗದವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷ ಟಿ.ವಿ. ಮಾರುತಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ದತ್ತಿಯ ಸಹ ಕಾರ್ಯದರ್ಶಿ ಡಬ್ಲ್ಯು. ಪಿ. ಕೃಷ್ಣ ಸ್ವಾಗತಿಸಿದರು.

Kannada Prabha

6-1-1997
ಕನ್ನಡ ಪ್ರಭ
ಬೆಂಗಳೂರು

ಪ್ರಜಾವಾಣಿ ಬುಧವಾರ 24ನೇ ಏಪ್ರಿಲ್ 1996 ಪುಟ 3

ಬೆಂಗಳೂರು ವಿಜ್ಞಾನ ವೇದಿಕೆ: ನ್ಯಾಷನಲ್ ಕಾಲೇಜು ಆವರಣ, ಬಸವನಗುಡಿ. ಪ್ರಕೃತಿಯ ಸೌರ ಕಕ್ಷೆ ಕುರಿತು ಉಪನ್ಯಾಸ- ಗೌತಮ್ ನಾಡಿಗ್. ಸಂಜೆ 6.

ವಾಸ್ತುವಿಜ್ಞಾನ ಸಂಶೋಧನಾ ಸಂಸ್ಥೆ: ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್, ಅಂಬೇಡ್ಕರ್ ರಸ್ತೆ. ವಾಸ್ತು ಯೋಜನೆ ಕುರಿತು ಉಪನ್ಯಾಸ- ಡಬ್ಲ್ಯು.ಪಿ. ಕೃಷ್ಣ. ಸಂಜೆ 6.

ರೋಟರಿ ಕ್ಲಬ್, ಬೆಂಗಳೂರು ದಕ್ಷಿಣ: ರೋಟರಿ ಸಭಾಂಗಣ, ಕೆ.ಆರ್. ರಸ್ತೆ. ಕರ್ನಾಟಕದಲ್ಲಿ ವಿದ್ಯುತ್ ಸ್ಥಿತಿಗತಿ ಕುರಿತು ಉಪನ್ಯಾಸ- ಡಿ.ಬಿ. ಪಾಲ್ಕರ್. ಸಂಜೆ 7.

ಪ್ರಜಾವಾಣಿ ಬುಧವಾರ 23ನೇ ಆಗಸ್ಟ್ 1995 ಪುಟ 3

ವಾಸ್ತು ವಿಜ್ಞಾನ ಸಂಶೋಧನಾ ಕೇಂದ್ರ: ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್, ಅಂಬೇಡ್ಕರ್ ಬೀದಿ. 'ವಾಸ್ತುಪುರುಷರ ಮಂಡಲದ ಸಹಾಯದಿಂದ ಕಟ್ಟಡಗಳ ಯೋಜನೆ' ಬಗ್ಗೆ ವಾಸ್ತು ಸಲಹೆಗಾರ ಡಬ್ಲ್ಯು.ಪಿ. ಕೃಷ್ಣ ಅವರಿಂದ ಉಪನ್ಯಾಸ. ಸಂಜೆ 5.45.



ನಗರದಲ್ಲಿ ಜರುಗಿದ 1992ರ ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿಯನ್ನು ಎಂ.ಎಸ್. ಗುಣಶೀಲನ್ ಅವರಿಗೆ ಸಣ್ಣ ನೀರಾವರಿ ಸಚಿವರಾದ ಆರ್.ಬಿ. ಚೌಧರಿಯವರು ನೀಡುತ್ತಿರುವುದು.

ಗುಣಶೀಲನ್‌ಗೆ ಸನ್ಮಾನ

ಬೆಂಗಳೂರು, ಜು. ೧೩- ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿ ವಿಜೇತ ಎಂ.ಎಸ್. ಗುಣಶೀಲನ್ ಅಭಿನಂದನಾ ಸಮಿತಿ ಆಶ್ರಯದಲ್ಲಿ ಪ್ರಶಸ್ತಿ ವಿಜೇತ ಎಂ.ಎಸ್. ಗುಣಶೀಲನ್ ಅವರಿಗೆ ಸನ್ಮಾನಿಸಲಾಯಿತು

ದೂರದರ್ಶನದ ನಿರ್ದೇಶಕರಾದ ಕೆ.ಎಂ. ಅನೀಸ್ ಉಲ್‌ಹಕ್ ಅವರು ಗುಣಶೀಲನ್ ಅವರಿಗೆ ಸನ್ಮಾನಿಸಿ ಮಾತನಾಡಿದರು.

ಗುಣಶೀಲನ್ ಅವರಿಗೆ ಇನ್ನೂ ಹೆಚ್ಚಿನ ರಾಷ್ಟ್ರೀಯ ಪುರಸ್ಕಾರ ಸಿಗುವಂತಾಗಲಿ ಎಂದು ಹಕ್ ಹಾರೈಸಿದರು.

ಸಣ್ಣ ನೀರಾವರಿ ಸಚಿವ ಡಾ. ಆರ್.ಬಿ. ಚೌದರಿ ಅವರು ಗುಣಶೀಲನ್ ಅವರ ಸಾಧನೆಯ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಕೆ.ಎಂ. ಹನುಮಂತರಾಯಪ್ಪ, ಬಿ.ಆರ್.ಜಿ. ರಾವ್, ಸುಗಮ ವಿಜಿ, ಚಲನಚಿತ್ರ ತಾರೆ ತಾರ ಅವರುಗಳು ಗುಣಶೀಲನ್ ಅವರಿಗೆ ಶುಭ ಹಾರೈಸಿದರು.

ಸನ್ಮಾನಿತ ಗುಣಶೀಲನ್ ಅವರು ಮಾತನಾಡಿ ತಾವು ಕಲಾರಂಗದಲ್ಲಿ ಬೆಳೆದು ಬಂದ ದಾರಿಯನ್ನು ನೆನೆಸಿಕೊಳ್ಳುತ್ತಾ ನನ್ನ ತಾಯಿಯೇ ನನಗೆ ಮೊದಲ ಗುರು, ಪ್ರತಿಯೊಬ್ಬರ ಯಶಸ್ಸಿಯ ಹಿಂದೆ ಒಂದು ಹೆಣ್ಣಿನ ಸಹಕಾರ ಇದ್ದೇ ಇರುತ್ತದೆ ಎಂದು ತಮ್ಮ ತಾಯಿಯ ಸಹಕಾರದ ಬಗ್ಗೆ ಹೇಳಿದ ವಿಚಾರ ಹೃದಯ ಸ್ಪರ್ಶಿಯಾಗಿತ್ತು. ಸಮಿತಿಯ ಉಪಾಧ್ಯಕ್ಷ ಡಿ. ಮುನಿಮಾರಾಯ್ಯ ಸ್ವಾಗತಿಸಿದರು. ಡಬ್ಲ್ಯು.ಪಿ. ಕೃಷ್ಣ ವಂದಿಸಿದರು.

ಬೆಂಗಳೂರು ಕನ್ನಡಪ್ರಭ

ಗುರುವಾರ, ಏಪ್ರಿಲ್ 29, 1993



ದೊಡ್ಡಬಳ್ಳಾಪುರದಲ್ಲಿ ನಡೆದ ರಾಜ್ಯ ಮಟ್ಟದ ನಾಟಕೋತ್ಸವದಲ್ಲಿ ಡಬ್ಲ್ಯು. ಪಿ. ಕೃಷ್ಣ ಅವರನ್ನು ಸನ್ಮಾನಿಸುತ್ತಿರುವುದು ನಟಗಂಗೋತ್ರಿ ಅಧ್ಯಕ್ಷ ಎಂ. ಎಸ್. ಗುಣಶೀಲನ್, ಪುರಸಭಾಧ್ಯಕ್ಷ ಕೆ. ಎಂ. ಹನುಮಂತರಾಯಪ್ಪ, ಆರ್. ಎನ್. ನಾಗರಾಜು ಹಾಗೂ ಎನ್. ಮೋಹನರಾಜು ಅವರನ್ನು ಕಾಣಬಹುದು.



ನಾಟಕೋತ್ಸವದ ೨೦೦ ಕಲಾವಿದರಿಗೆ ಪ್ರಶಸ್ತಿ ಪತ್ರ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಏ. ೨೮- ದೊಡ್ಡಬಳ್ಳಾಪುರದ ನಟ ಗಂಗೋತ್ರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಏಪ್ರಿಲ್ 23 ರಿಂದ ಮೂರು ದಿನಗಳ ಕಾಲ ಅದ್ದೂರಿಯ ನಾಟಕೋತ್ಸವ ನಡೆಸಲಾಯಿತು.

ನಾಟಕೋತ್ಸವದಲ್ಲಿ ಭಾಗವಹಿಸಿದ್ದ 9 ತಂಡಗಳಿಗೆ ನೆನಪಿನ ಕಾಣಿಕೆ ನೀಡಿ ಸುಮಾರು 200 ಕಲಾವಿದರಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ಹಿರಿಯ ಕಲಾವಿದರಾದ ಎಂ.ಎನ್. ಅಶ್ವಥಪ್ಪ, ಸಿ. ಆಂಜನಪ್ಪ, ಡಬ್ಲ್ಯು.ಪಿ. ಕೃಷ್ಣ ಅವರನ್ನು ಸನ್ಮಾನಿಸಲಾಯಿತು.

ಮುಖ್ಯ ಅತಿಥಿಗಳಾಗಿ ದಕ್ಷಿಣ ರೈಲ್ವೆಯ ಎಸ್.ಪಿ. ಕೆ.ವಿ. ಠ್ಯಾಗೂರ್, ಪುರಸಭಾಧ್ಯಕ್ಷ ಕೆ.ಎಂ. ಹನುಮಂತರಾಯಪ್ಪ, ತಾಲ್ಲೂಕು ಕಾಂಗ್ರೆ ಅಧ್ಯಕ್ಷ ಜಿ.ಎಂ. ಚನ್ನಪ್ಪ, ಪತ್ರಕರ್ತರಾದ ಆ.ಚ. ಶಿವಣ್ಣ, ಚಿತ್ರ ನಟರಾದ ಸರಿಗಮ ವಿಜಿ ನಾಟಕ ಅಕಾಡೆಮಿ ಸದಸ್ಯರಾದ ಬಿ.ಆರ್.ಜಿ. ರಾವ್, ಎನ್. ರಾಮರೆಡ್ಡಿ ಮುಂತಾದವರು ಕಲೆಯ ಬಗ್ಗೆ ವಿವಿಧ ಆಯಾಮಗಳಲ್ಲಿ ಮಾತನಾಡಿ ಯಶಸ್ವಿ ನಾಟಕೋತ್ಸವ ಕಾರ್ಯಕ್ರಮದ ಬಗ್ಗೆ ಮುಕ್ತ ಕಂಠದಿಂದ ಪ್ರಶಂಸಿಸಿದರು. ತಾಲ್ಲೂಕು ಜನತಾದಳದ ಅಧ್ಯಕ್ಷ ಪಿ. ತೋಟದಪ್ಪ ಅಧ್ಯಕ್ಷತೆ ವಹಿಸಿದ್ದರು. ಆರ್.ಎನ್. ನಾಗರಾಜ್ ಸ್ವಾಗತಿಸಿದರು. ಡಿ. ಮುನಿಮಾರಯ್ಯ ವಂದಿಸಿದರು.

ದೊಡಬಳ್ಳಾಪುರದ ಪುರಭವನದಲ್ಲಿ ಶೀಲನ್ ಸಂಚಾಲಕ ಆರ್.ಎನ್. ನಾಗರಾಜ್ ಸದಸ್ಯರಾದ ಬಿ.ವಿ. ರಾಮಣ್ಣ, ಯಲ್ಲಪ್ಪ, ಲಕ್ಕಣ್ಣ, ಬಿ.ಆರ್.ಜಿ. ರಾವ್ ಅವರ ಸಮ್ಮುಖದಲ್ಲಿ ನಾಟಕೋತ್ಸವ ಉದ್ಘಾಟನೆಯಾಯಿತು.

ದೊಡ್ಡಬಳ್ಳಾಪುರ ತಾಲ್ಲೂಕು ಹಣಬೆಯ ಕೋಡಿರಂಗನಾಥಸ್ವಾಮಿ ಕೃಪಾ ಪೋಷಿತ ನಾಟಕ ಮಂಡಳಿ ಅವರು ಭಾರತ ಸಂಗ್ರಾಮ ನಾಟಕವನ್ನು ಮತ್ತು ಮಧುಗಿರಿ ತಾಲ್ಲೂಕು ಸೋದೇನಹಳ್ಳಿಯ ಶ್ರೀರಂಗನಾಥ ಸ್ವಾಮಿ ನಾಟಕ ಮಂಡಳಿಯವರು 'ದೇವಿ ಮಹಾತ್ಮೆ' ನಾಟಕವನ್ನು ಅಂದು ಪ್ರದರ್ಶಿಸಿದರು.

ನಾಟಕೋತ್ಸವದ ಎರಡನೆಯ ದಿನವಾದ ಏ.24 ರಂದು ರಾಮಯ್ಯನಪಾಳ್ಯದ ಶ್ರೀ ಆಂಜನೇಯ ಕೃಪಾ ಪೋಷಿಕ ನಾಟಕ ಮಂಡಳಿ "ಶನಿಮಾಹತ್ಮೆ" ದೊಡ್ಡ ಬ್ಯಾಲಕೆರೆ ಹೆಸರಘಟ್ಟದ ಆಂಜನೇಯ ನಾಟಕ ಮಂಡಳಿ "ಸುಪ್ರಭಾ ವಿಲಾಸ' ನಾಟಕವನ್ನು ಕಾಡಗಾನಹಳ್ಳಿ ಆಂಜನೇಯ ಕೃಪಾ ಪೋಷಿತ ಮಂಡಳಿ ಅವರಿಂದ 'ದಕ್ಷ ಬ್ರಹ್ಮಯಾಗ' ನಾಟಕವನ್ನು ಪ್ರದರ್ಶಿಸಲಾಯಿತು.

ಏ.. ರಂದು ನೆಲಮಂಗಲದ ಶಾಲೆಯವರಿಂದ 'ಶ್ರೀ ಕೃಷ್ಣ ಲೀಲೆ', ದೊಡ್ಡಬಳ್ಳಾಪುರದ ಶ್ರೀ ಗುರು ಕೃಪಾ ಪೋಷಿತ ಬಾಲಕ ಯಕ್ಷಗಾನ ಮಂಡಳಿ ಅವರಿಂದ 'ಗೌರಿ ಪರಿಣಯ' ನಾಟಕವನ್ನು ದೊಡ್ಡಬಳ್ಳಾಪುರದ ಶ್ರೀ ವಿಘ್ನೇಶ್ವರ ಬಾಲಕ ಭಕ್ತ ಮಂಡಳಿ ಅವರಿಂದ 'ದುಶ್ಯಸನವಧೆ' ನಾಟಕವನ್ನು ಶ್ರೀ ಯರ್ನಳ್ಳಿ ಪಾಪಣ್ಣನವರ ಮಂಡಳಿ ...ದ 'ಕರಿರಾಜ ಚರಿತೆ' ನಾಟಕ ಪ್ರದ

ಪುಟ 2 ಸಂಜೆವಾಣಿ ಸೋಮವಾರ ೬ನೇ ಜನವರಿ 1992

ರಾಜ್ಯ ಯುವ ಪ್ರಶಸ್ತಿ ವಿಜೇತರು

ಬೆಂಗಳೂರು, ಜ ೬- ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ರಾಜ್ಯದಲ್ಲಿ ಯುವಜನ ಚಟುವಟಿಕೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಯುವ ಪ್ರಶಸ್ತಿಗಳನ್ನು ನೀಡುತ್ತಿದೆ. 1989-90 ಮತ್ತು 90-91ನೇ ಸಾಲುಗಳಲ್ಲಿ ಸಮಾಜ ಸೇವೆ, ಸಾಂಸ್ಕೃತಿಕ ಕ್ಷೇತ್ರ, ಯುವಜನಾಭಿವೃದ್ಧಿ ಕ್ಷೇತ್ರಗಳಲ್ಲಿ ಉತ್ತಮ ಸಮುದಾಯ ಸೇವೆ ಸಲ್ಲಿಸಿದ ತಲಾ 10 ಜನ ಯುವಜನರಿಗೆ ತಲಾ 5,000-00 ರೂ.ಗಳ ನಗದು ಬಹುಮಾನ ಮತ್ತು ಎರಡು ಸಂಸ್ಥೆಗಳಿಗೆ ತಲಾ 25.000-00 ರೂ.ಗಳ ನಗದು ಬಹುಮಾನಗಳೇ ಅಲ್ಲದೆ ಪದಕ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಸನ್ಮಾನಿಸಲಾಗುತ್ತದೆ.

1989-90 ಮತ್ತು 1990-91ನೇ ಸಾಲಿಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ ಕೆಳಕಾಣಿಸಿದ 20 ಯುವಜನರಿಗೆ ಮತ್ತು 4 ಯುವ ಸಂಸ್ಥೆಗಳಿಗೆ ಕರ್ನಾಟಕ ಯುವ ಪ್ರಶಸ್ತಿಯನ್ನು ನೀಡಲಾಗುವುದು.

1989-90ನೇ ಸಾಲಿನ ರಾಜ್ಯ ಮಟ್ಟದ ಯುವಕ ಪ್ರಶಸ್ತಿ ಪಡೆದವರ ಹೆಸರು ಮತ್ತು ವಿಳಾಸ

ಡಬ್ಲ್ಯು. ಪಿ. ಕೃಷ್ಣ, ಬೆಂಗಳೂರು., ಬಿ. ತಾಕಪ್ಪ, ಸಾಗರ್ ವಿಲೇಜ್, ಶಿವಮೊಗ್ಗ ಜಿಲ್ಲೆ. ಜೆ. ನಂಜುಂಡಯ್ಯ, ಶ್ರೀರಂಗಪಟ್ಟಣ., ದತ್ತಾತ್ರೇಯ ರೆಡ್ಡಿ, ಬಳ್ಳಾರಿ, ಎಸ್.ಇ. ಮಹಮದ್ ಕುನ್ನಿಹಿ ಕೊಯನಾಡ್ ಕೊಡಗು ಜಿಲ್ಲೆ., ಚಂದ್ರಶೇಖರ್, ಎ. ಹೆಗ್ಡೆ, ಕಣಸೂರ್, ಸಿದ್ದಾಪುರ., ಮೂಂತೇಶ್ ಆನಂದಗೌಡ ಪಾಟೀಲ್, ಹಿರೆಬಾಗೇವಾಡಿ, ಬೆಳಗಾವಿ ಜಿಲ್ಲೆ., ಕುಮಾರಿ ಗೌಡಿಕೊಟ್ಟೂರ್, ಸಪ್ತಾಪುರ, ಧಾರವಾಡ., ಈರಯ್ಯ ಲಿಂಗಯ್ಯ ಕಿಲ್ಲೇದಾರ್, ಗೂಡಿಕಟ್ಟೆ ಬೆಳಗಾವಿ ಜಿಲ್ಲೆ., ಎಂ. ಶ್ರೀನಿವಾಸ್, ಕ್ಯಾತ್‌ಸಂದ್ರ, ತುಮಕೂರು ಜಿಲ್ಲೆ.

1989-90ನೇ ಸಾಲಿನ ರಾಜ್ಯಮಟ್ಟದ ಯುವ ಪ್ರಶಸ್ತಿ ನೀಡಲಾದ ಯುವ ಸಂಸ್ಥೆಗಳು.

ವಿಕಾಸ್ ಯುವಕ ಮಂಡಲ, ಹೊಸಪೇಟೆ, ಬಳ್ಳಾರಿ ಜಿಲ್ಲೆ., ಕಳೂರು ಯುವತಿ ಮಂಡಲ, ಕಳೂರು ಶಿವಮೊಗ್ಗ ಜಿಲ್ಲೆ.

1990-91ನೇ ಸಾಲಿನ ಯುವ ಪ್ರಶಸ್ತಿ ಪಡೆದವರ ಹೆಸರು ಮತ್ತು ವಿಳಾಸ ಸಂಗಣ್ಣ ಗುರುವಾಡ್, ಮಹಾತ್ಮಗಾಂಧಿ ಯೂತ್ ಕ್ಲಬ್, ಸವಡಿ, ಅಥಣಿ ತಾಲ್ಲೂಕು., ಸೋಮಶೇಖರ್, ಬೇಲೇನಹಳ್ಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. ಟಿ.ಎಲ್. ನಾಗರಾಜ್, ತಳಗವಾಡಿ ಗ್ರಾಮ, ಮಂಡ್ಯ ಜಿಲ್ಲೆ., ಡಿ.ಯುಂ. ಛಾಯ ಹೊಸನಗರ, ಶಿವಮೊಗ್ಗ ಜಿಲ್ಲೆ., ವೀರಭದ್ರ ಸಿಂಪಿ., ನಿಲೋಗಿ ಗುಲ್ಬರ್ಗಾ ಜಿಲ್ಲೆ., ಪಿ. ಗಾದೇಪ್ಪ, ಗಾಂಧಿನಗರ, ಬಳ್ಳಾರಿ., ಎಂ.ಕೆ. ವಿಠಲ್‌ಕುಮಾರ್, ಅಶೋಕ್‌ಪುರಂ, ಮಡಿಕೇರಿ., ಜಿ.ವಿ. ವೀರೇಂದ್ರ ಪ್ರಸಾದ್, ಗರಗದೊಡ್ಡಿ, ತುಮಕೂರು ಜಿಲ್ಲೆ., ದುರ್ಗಾದಾಸ್ ಗಂಗೋಳ್ಳಿ , ಕುಮಟ., ಸಂದೀದುರ್ಗ ಬಾಲು, ಬೆಂಗಳೂರು.

1990-91ನೇ ಸಾಲಿನ ರಾಜ್ಯಮಟ್ಟದ ಯುವ ಪ್ರಶಸ್ತಿ ಪಡೆದ ಯುವ ಸಂಸ್ಥೆಗಳ ಹೆಸರು ಮತ್ತು ವಿಳಾಸ.

ನೆಹರು ಯುವಕ ಸಂಘ, ಬುಸನೂರು, ತಾಲ್ಲೂಕು ಆಳಂದ, ಜಿಲ್ಲೆ ಗುಲ್ಬರ್ಗಾ., ಡಾ: ಅಂಬೇಡ್ಕರ್ ಯೂತ್ ಕ್ಲಬ್, ಕುಣಿಗಲ್, ತುಮಕೂರು ಜಿಲ್ಲೆ.

ಈ ಕರ್ನಾಟಕ ಯುವ ಪ್ರಶಸ್ತಿಗಳನ್ನು ರಾಷ್ಟ್ರೀಯ ಯುವ ದಿನಾಚರಣೆಯ ಅಂಗವಾಗಿ ದಿನಾಂಕ 12.1.1992 ರಂದು ಬೆಳಿಗ್ಗೆ 10.00 ಗಂಟೆಗೆ ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಯುವನಿಕಾದಲ್ಲಿ ನಡೆಯುವ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ನೀಡಲಾಗುವುದು. ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರಾದ ಎಸ್. ರಮೇಶ್‌ರವರು ಯುವ ಸಪ್ತಾಹದ ಉದ್ಘಾಟನೆಯೊಂದಿಗೆ ಪ್ರಶಸ್ತಿ ಪಡೆದ ನಾಲ್ಕು ಯುವಜನ ಸಂಸ್ಥೆಗಳಿಗೆ ಪ್ರಶಸ್ತಿ ಪ್ರಧಾನ ಮಾಡಲಿದ್ದಾರೆ. ಎಸ್.ಆರ್. ಮೋರೆ, ಸಹಕಾರ ರಾಜ್ಯ ಇಲಾಖೆಯ ರಾಜ್ಯ ಸಚಿವರು ವೈಯಕ್ತಿಕ ಯುವ ಪ್ರಶಸ್ತಿಗಳನ್ನು ಪ್ರಧಾನ ಮಾಡಲಿದ್ದಾರೆ. ರೇಷ್ಮೆ ಇಲಾಖೆಯ ರಾಜ್ಯ ಸಚಿವರಾದ ವಿ. ಮುನಿಯಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

DECCAN HERALD, Sunday, January 5, 1992 3

Awards for youths announced

By Our Staff Reporter

BANGALORE, Jan. 4.— The Department of Youth Services and Sports has announced the names of youngsters and institutions chosen for the awards given in recognition of work in social service, culture, youth development and community development during 1989-90 and 1990-91.

According to an official press release, the individual award comprises Rs. 5,000 in cash while for institutions, it is Rs. 25,000 in cash and medals.

The young persons chosen for the award for 1989-90 are: Messrs. W.P. Krishna, Bangalore; B. Thakappa, Sagar taluk; J. Nanjundaiah, Srirangapatna; Dattatreya Reddy, Bellary; S.E. Ahmed Kunhi, Kodagu district; Chandrashekar Hegde, Siddapur taluk; M. Anandagouda Patil, Belgaum district; Eraiah Lingaiah Killedar, Bailahongal taluk; M. Srinivas, Kyathasandra and Ms. Gowri Kottur, Dharwad.

The institutions chosen for the award are: Vikas Yuvaka Mandala, Hospet and Kalur Yuvathi Mandala, Hosanagar.

Those selected for the award for 1990-91 are: Messrs. Sanganna Guruwad, Athni taluk; Somashekar, Tarikere taluk; T.L. Nagaraj, Malavalli taluk; D.M. Chaya, Hosanagar; Veerabhadra Simpi, Jewargi taluk; P. Gadeppa, Bellary; M.K. Vithalkumar, Madikeri; G.V. Veerendra Prasad, Koratagere taluk; Durgadas Gangolli, Kumta; Sandidurga Balu, HAL third stage, Bangalore.

The institutions are: Nehru Yuvaka Sangha, Aland taluk and Dr. Ambedkar Youth Club, Kunigal.



1990ರ ಕರ್ನಾಟಕ ರಾಜ್ಯ ಯುವ ಪ್ರಶಸ್ತಿ ಪಡೆದಿರುವ ನಗರದ ಡಬ್ಲ್ಯು.ಪಿ. ಕೃಷ್ಣ

ಬೆಂಗಳೂರು ಕನ್ನಡಪ್ರಭ
ಶನಿವಾರ ಜನವರಿ 4, 1992

ಯುವಜನ ಸೇವೆ ಪ್ರಶಸ್ತಿ ವಿಜೇತರು

ಕನ್ನಡಪ್ರಭ ವಾರ್ತೆ
ಬೆಂಗಳೂರು, ಜ. 3

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ 1989-90 ಮತ್ತು 90-91ನೆಯ ಸಾಲಿನ ಯುವ ಪ್ರಶಸ್ತಿಗಳನ್ನು ಪ್ರಕಟಿಸಿದೆ.

ಸಾಂಸ್ಕೃತಿಕ ಮತ್ತು ಯುವಜನಾಭಿವೃದ್ಧಿ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ಹತ್ತು ಯುವಕರಿಗೆ ತಲಾ ಐದು ಸಾವಿರ ರೂಪಾಯಿ ಮತ್ತು ಎರಡು ಸಂಸ್ಥೆಗಳಿಗೆ ತಲಾ 25 ಸಾವಿರ ರೂಪಾಯಿ ನಗದು ಬಹುಮಾನ, ಪದಕ ಹಾಗೂ ಪ್ರಶಸ್ತಿಪತ್ರ ನೀಡಿ ಗೌರವಿಸಲಾಗುವುದು.

ಯುವ ಪ್ರಶಸ್ತಿ ಪಡೆದವರ ಹೆಸರುಗಳು (1989-90)

ಡಬ್ಲ್ಯು.ಪಿ. ಕೃಷ್ಣ, ಬೆಂಗಳೂರು; ವಿ. ತಾಕಪ್ಪ, ಗೌತಮಪುರ, ಸಾಗರ ತಾಲ್ಲೂಕು; ಜಿ. ನಂಜುಂಡಯ್ಯ, ಗಂಜಾಂ, ಶ್ರೀರಂಗಪಟ್ಟಣ ತಾಲ್ಲೂಕು; ದತ್ತಾತ್ರೇಯರೆಡ್ಡಿ, ಬಳ್ಳಾರಿ; ಎಸ್.ಇ. ಮಹಮದ್ ಕುಞ್ಞಿ, ಕೊಡಗು; ಚಂದ್ರಶೇಖರ ಹೆಗಡೆ, ಕಾನಸೂರು, ಸಿದ್ದಾಪುರ ತಾಲ್ಲೂಕು; ಮಾಂತೇಶ ಆನಂದಗೌಡ ಪಾಟೀಲ, ಹಿರೆಬಾಗೇವಾಡಿ, ಬೆಳಗಾವಿ ಜಿಲ್ಲೆ; ಕುಮಾರಿ ಧಾರವಾಡ ಈಶ್ವರಯ್ಯ ಲಿಂಗಯ್ಯ, ಗುಡಿಕಟ್ಟೆ, ಬೈಲಹೊಂಗಲ ತಾಲ್ಲೂಕು; ಎಂ. ಶ್ರೀನಿವಾಸ್, ಕ್ಯಾತ್ಸಂದ್ರ, ತುಮಕೂರು ಜಿಲ್ಲೆ.

ಸಂಸ್ಥೆಗಳು

ವಿಕಾಸ ಯುವಕ ಮಂಡಲ, ಹೊಸಪೇಟೆ ಮತ್ತು ಕಳೂರು ಯುವತಿ ಮಂಡಲ, ಹೊಸನಗರ.

1990-91ರ ಪ್ರಶಸ್ತಿ ಪಡೆದ ಯುವಕರು

ಸಂಗಣ್ಣ ಗುರುಪಾದ [illegible] ತಾಲ್ಲೂಕು; [illegible] ಬೀರನಹಳ್ಳಿ, ತರೀಕೆರೆ ತಾಲ್ಲೂಕು; ಟಿ.ಎಲ್. ನಾಗರಾಜ್, ತಳಗವಾಡಿ, ಮಳವಳ್ಳಿ ತಾಲ್ಲೂಕು; ಡಿ.ಎಂ. ಛಾಯಾ, ಹೊಸನಗರ; ವೀರಭದ್ರ ಸಿಂಪಿ, ಶ್ರೀವರ್ಗಿ ತಾಲ್ಲೂಕು; ಪಿ. ಗಾದೆಪ್ಪ, ಬಳ್ಳಾರಿ; ಎಂ.ಕೆ. ವಿಠಲಕುಮಾರ್, ಮಡಿಕೇರಿ; ವೀರೇಂದ್ರ ಪ್ರಸಾದ್, ಗುಗಗದೊಡ್ಡಿ, ಕೊರಟಗೆರೆ ತಾಲ್ಲೂಕು; ದುರ್ಗಾದಾಸ್, ಕುಮಟಾ ಮತ್ತು ಸಂದೀಪ ದುಗ್ಗಾ, ಬಾಲು, ಬೆಂಗಳೂರು.

ಸಂಸ್ಥೆಗಳು: ನೆಹರೂ ಯುವಕ ಸಂಘ, ಬಸನೂರು, ಆಳಂದ ತಾಲ್ಲೂಕು ಮತ್ತು ಡಾ. ಅಂಬೇಡ್ಕರ್ ಯೂತ್ ಕ್ಲಬ್, ಕಾಣಿಗಲ್.

ಜನವರಿ 12 ರಂದು ನಗರದ ಯವನಿಕಾದಲ್ಲಿ ಜರುಗುವ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುವುದು.

ಯುವ ಪ್ರಶಸ್ತಿ ಪ್ರಕಟಣೆ

ಬೆಂಗಳೂರು, ಜ. ೩- ರಾಜ್ಯ ಯುವಜನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯವು ೧೯೮೯-೯೦ ಮತ್ತು ೯೦-೯೧ರ ಸಾಲಿನಲ್ಲಿ ಉತ್ತಮ ಸೇವೆ ಸಲ್ಲಿಸಿದ ೨೦ ಮಂದಿ ಯುವ ಜನರಿಗೆ ಹಾಗೂ ೪ ಯುವ ಸಂಸ್ಥೆಗಳಿಗೆ 'ಕರ್ನಾಟಕ ಯುವ ಪ್ರಶಸ್ತಿ'ಗಳನ್ನು ಪ್ರಕಟಿಸಿದೆ.

ರಾಜ್ಯಮಟ್ಟದ ಯುವ ಪ್ರಶಸ್ತಿಯನ್ನು ೧೯೮೯-೯೦ ಸಾಲಿನಲ್ಲಿ ಪಡೆದವರು. ಡಬ್ಲ್ಯೂ ಪಿ. ಕೃಷ್ಣ (ಬೆಂಗಳೂರು), ಬಿ. ತಾಕಪ್ಪ (ಶಿವಮೊಗ್ಗ), ಜೆ. ನಂಜುಂಡಯ್ಯ (ಶ್ರೀರಂಗ ಪಟ್ಟಣ), ದತ್ತಾತ್ರೇಯ ರೆಡ್ಡಿ (ಬಳ್ಳಾರಿ), ಎಸ್.ಇ. ಮಹ್ಮದ್ ಕುನ್ಹಿ (ಕೊಡಗು), ಮಹಾಂತೇಶ್ ಆನಂದಗೌಡ ಪಾಟೀಲ್ (ಬೆಳಗಾವಿ), ಕುಮಾರಿ ಗೌರಿ ಕೊಟ್ಟೂರ್ (ಧಾರವಾಡ), ಈರಯ್ಯ ಲಿಂಗಯ್ಯ ಕಿಲ್ಲೇದಾರ್ (ಬೆಳಗಾವಿ) ಹಾಗೂ ಎಂ. ಶ್ರೀನಿವಾಸ್ (ತುಮಕೂರು).

ಸಂಗಣ್ಣ ಗುರುವಾಡ್ (ಅಥಣಿ), ಸೋಮಶೇಖರ್ (ಚಿಕ್ಕಮಗಳೂರು), ಟಿ.ಎಲ್. ನಾಗರಾಜ್ (ಮಂಡ್ಯ), ಡಿ.ಎಂ. ಧಾಯಾ (ಶಿವಮೊಗ್ಗ), ವೀರಭದ್ರ ಸಿಂಪಿ (ಕಲ್ಬುರ್ಗಿ), ಪಿ. ಗಾದೇಪ್ಪ (ಬಳ್ಳಾರಿ), ಎಂ.ಕೆ. ವಿಠಲ್‌ಕುಮಾರ್ (ಮಡಿಕೇರಿ), ಜಿ.ವಿ. ವೀರೇಂದ್ರ (ಕುಮಟಾ), ಸಂದೀದುರ್ಗ ಬಾಲು (ಬೆಂಗಳೂರು) ಇವರಿಗೆ ೧೯೯೦-೯೧ರ ಸಾಲಿನ ಪ್ರಸಾದ್ (ತುಮಕೂರು) ದುರ್ಗಾದಾಸ್ ಗಂಗೊಳ್ಳಿ ಯುವ ಪ್ರಶಸ್ತಿಗಳನ್ನು ನೀಡಲಾಗಿದೆ.

ವಿಕಾಸ್ ಯುವಕ ಮಂಡಲ, ಹೊಸಪೇಟೆ (ಬಳ್ಳಾರಿ), ಕಳೂರು ಯುವತಿ ಮಂಡಲ ಹೊಸನಗರ (ಶಿವಮೊಗ್ಗ) ಇವುಗಳಿಗೆ ೧೯೮೯-೯೦ರ ಯುವ ಪ್ರಶಸ್ತಿಯನ್ನೂ, ನೆಹರು ಯುವಕ ಸಂಘ, ಆಳಂದ ಕಲ್ಬುರ್ಗಿ, ಡಾ. ಅಂಬೇಡ್ಕರ್ ಯೂತ್ ಕ್ಲಬ್ ಕುಣಿಗಲ್ (ತುಮಕೂರು) ಇವುಗಳಿಗೆ ೯೦-೯೧ರ ಸಾಲಿನ ಯುವ ಪ್ರಶಸ್ತಿಗಳನ್ನು ನೀಡಲಾಗಿದೆ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಇಂಜಿನಿಯರಿಂಗ್ ವಿದ್ಯಾರ್ಥಿ ಕ್ರಿಯಾಸಮಿತಿ ಒತ್ತಾಯ

ಬೆಂಗಳೂರು, ಜ. ೧೧–ಮೊದಲನೇ ವರ್ಷದ ಇಂಜಿನಿಯರಿಂಗ್ ಪದವಿಯ ವಿಷಯಗಳಲ್ಲಿ ಆರು ಯತ್ನಗಳಲ್ಲಿ ತೇರ್ಗಡೆಯಾಗದಿದ್ದಲ್ಲಿ ಇಂಜಿನಿಯರಿಂಗ್ ಶಿಕ್ಷಣವನ್ನು ಮುಂದುವರೆಸುವಂತಿಲ್ಲವೆಂದು ನಿಯಮವನ್ನು ರದ್ದುಪಡಿಸಬೇಕೆಂದು ನಗರ ವಿಶ್ವವಿದ್ಯಾಲಯ ಇಂಜನಿಯರಿಂಗ್ ವಿದ್ಯಾರ್ಥಿಗಳ ಕ್ರಿಯಾ ಸಮಿತಿ ಒತ್ತಾಯಿಸಿದೆ.

ಈ ಬಗ್ಗೆ ವಿಶ್ವವಿದ್ಯಾಲಯದ ಗಮನ ಸೆಳೆಯಲು ಇದೇ ೧೬ರಿಂದ ಮುಷ್ಕರವನ್ನು ಆರಂಭಿಸಲಿದ್ದು, ವಿಶ್ವವಿದ್ಯಾಲಯ ಇಂಜನಿಯರಿಂಗ್ ಹಾಗು ಆರ್ಕಿಟೆಕ್ಚರ್ ವಿದ್ಯಾರ್ಥಿಗಳ ಸಂಘವು ಇದನ್ನು ಬೆಂಬಲಿಸುವುದಾಗಿ ಅದರ ಅಧ್ಯಕ್ಷ ಡಬ್ಲ್ಯು. ಪಿ. ಕೃಷ್ಣ ತಿಳಿಸಿದ್ದಾರೆ.

ಇದೇ ವಿಶ್ವವಿದ್ಯಾಲಯದ ಇತರ ಪದವಿಗಳಿಗೆ ಅನ್ವಯಿಸದ ಈ ನಿಯಮ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಮಾತ್ರವೇ ಏಕೆ ಎಂದು ಪ್ರಶ್ನಿಸಿರುವ ಅವರು ಇದರಿಂದಾಗಿ ೧೦ ಸಾವಿರ ಇಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ವರ್ಷಕ್ಕೆ ಐನೂರು ವಿದ್ಯಾರ್ಥಿಗಳಾದರೂ ತಾಂತ್ರಿಕ ಶಿಕ್ಷಣ ಲಭ್ಯವಿಲ್ಲದವರಾಗುತ್ತಾರೆಂದೂ ತಿಳಿಸಿದ್ದಾರೆ.

ಸಂಜೆ ವಾಣಿ
ಕನ್ನಡ ಸಂಜೆ ದಿನಪತ್ರಿಕೆ
ಬುಧವಾರ ಜನವರಿ 11, 1984 ಪುಟ 4

ಅತ್ಯಧಿಕ ಪ್ರಸಾರವುಳ್ಳ ಕನ್ನಡ ಸಂಜೆ ದಿನಪತ್ರಿಕೆ

ಜನವಾಣಿ

ವ್ಯವಸ್ಥಾಪಕ ಸಂಪಾದಕರು : ಡಾ|| ಎಂ. ಡಿ. ನಟರಾಜ್

ಬೆಂಗಳೂರು ಮಂಗಳವಾರ 10 ಜನವರಿ 1984

ಎಂಜನೀರಿಂಗ್ ವಿದ್ಯಾರ್ಥಿಗಳ ಬೇಡಿಕೆಗಳು

ಬೆಂಗಳೂರು, ಜ. ೧೦– ಇಂಜನೀಯರ ವಿದ್ಯಾರ್ಥಿಗಳ ಕ್ರಿಯಾ ಸಮಿತಿ ಆಶ್ರಯದಲ್ಲಿ ವಾರ್ಷಿಕ ಬಿ.ಇ. ಪರೀಕ್ಷೆಯಲ್ಲಿ ಇಂಜನಿಯರಿಂಗ್ ವಿದ್ಯಾರ್ಥಿ ಮೊದಲನೆ ವರ್ಷದ ಪರೀಕ್ಷೆಯಲ್ಲಿ ಆರು ಬಾರಿಯೂ ಉತ್ತೀರ್ಣನಾಗದಿದ್ದಲ್ಲಿ ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ ಎಂಬ ನಿರ್ಣಯವನ್ನು ವಿರೋಧಿಸಿ ನಡೆಸುತ್ತಿರುವ ಚಳವಳಿಗೆ ಬೆಂಗಳೂರು ವಿಶ್ವವಿದ್ಯಾನಿಲಯ ಇಂಜನಿಯರಿಂಗ್ ಮತ್ತು ಆರ್ಕಿಟೆಕ್ಚರ್ ವಿದ್ಯಾರ್ಥಿ ಫೆಡರೇಷನ್ ತನ್ನ ಬೆಂಬಲ ವ್ಯಕ್ತಪಡಿಸಿದೆ.

ಫೆಡರೇಷನ್ ಪತ್ರಿಕಾ ಹೇಳಿಕೆಯೊಂದರಲ್ಲಿ ದೇಶದ ಯಾವ ಭಾಗ

(೩ನೇ ಪುಟದ ೮ನೇ ಕಾಲಂ ನೋಡಿ)

ಬೇಡಿಕೆಗಳು

(ಒಂದನೇ ಪುಟದಿಂದ)

ದಲ್ಲಿಯೂ ಇಂತಹ ನಿಬಂಧನೆಯಿಲ್ಲ. ಬೆಂಗಳೂರು ವಿ.ವಿ. ನಿಲುವು ಬೇರೆ ಯಾವುದೇ ಕೋರ್ಸುಗಳಿಗೂ ಇಂತಹ ಕಟ್ಟುಪಾಡು ಇಲ್ಲದಾಗ ಕೇವಲ ಬಿ.ಇ. ವಿದ್ಯಾರ್ಥಿಗಳಿಗೆ ಮಾತ್ರ ಈ ಶಿಕ್ಷೆ ವಿಧಿಸುವುದು ಸಲ್ಲದು ಎಂದು ತಿಳಿಸಿದೆ.

ಆದ ಕಾರಣ ಈ ಕಾನೂನನ್ನು ಕೂಡಲೇ ತೆಗೆದುಹಾಕಬೇಕೆಂದು ಅದು ಒತ್ತಾಯಿಸಿದೆ.

ಪ್ರಥಮ ವರ್ಷದಲ್ಲಿ ಎಷ್ಟೇ ವಿಷಯಗಳಲ್ಲಿ ನಪಾಸಾಗಿದ್ದರೂ ಆತನನ್ನು ಎರಡನೇ ವರ್ಷಕ್ಕೆ ತೆಗೆದುಕೊಳ್ಳಬೇಕು. ಮತ್ತು ಪ್ರಥಮ ವರ್ಷದ ವಿಷಯಗಳಲ್ಲಿ ಶೇಕಡ ೫೦ ರಷ್ಟನ್ನಾದರೂ ಮುಗಿಸಿಕೊಂಡಲ್ಲಿ ಆತನು ಎರಡನೇ ವರ್ಷದ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರಬೇಕು. ಅದೇ ರೀತಿ ಆತ ಪ್ರಥಮ ವರ್ಷದ ವಿಷಯಗಳಲ್ಲಿ ಶೇ. ೭೦ರಷ್ಟನ್ನು ಮುಗಿಸಿಕೊಂಡಲ್ಲಿ ಮತ್ತು ಎರಡನೇ ವರ್ಷದ ವಿಷಯಗಳಲ್ಲಿ ಶೇ|| ೫೦ ರಷ್ಟನ್ನು ಮುಗಿಸಿಕೊಂಡಲ್ಲಿ ಆತ ಮೂರನೇ ವರ್ಷದ ಪರೀಕ್ಷೆಗೆ ಕೂಡಲು ಅವಕಾಶ ಬೇಕು. ನಾಲ್ಕನೇ ವರ್ಷದ ಪರೀಕ್ಷೆಗೆ ಕೂಡಲು ಆತ ಪ್ರಥಮ ವರ್ಷದ ವಿಷಯಗಳ ಶೇ ೯೦ರಷ್ಟು, ಎರಡನೇ ವರ್ಷದ ವಿಷಯಗಳ ಶೇ. ೭೦ರಷ್ಟು ಮತ್ತು ಮೂರನೇ ವರ್ಷದ ವಿಷಯಗಳ ಶೇಕಡಾ ೫೦ ರಷ್ಟು ಮುಗಿಸಿರಬೇಕು. ಇವು ಬೆಂಗಳೂರು ವಿಶ್ವವಿದ್ಯಾನಿಲಯದ ಎಂಜನಿಯರಿಂಗ್ ವಿದ್ಯಾರ್ಥಿ ಕ್ರಿಯಾ ಸಮಿತಿಯ ಬೇಡಿಕೆಗಳಾಗಿದ್ದು ಅವನ್ನು ಫೆಡರೇಷನ್ ಬಲವಾಗಿ ಸಮರ್ಥಿಸುವುದು ಎಂದು ಫೆಡರೇಷನಿನ ಅಧ್ಯಕ್ಷ ಡಬ್ಲ್ಯು.ಕೆ.ವಿ. ಕೃಷ್ಣ ಮತ್ತು ಖಜಾಂಚಿ ಶ್ರೀ ಎನ್. ಬಾಲಚಂದ್ರ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

Loka Vani

April 18 '82

ತಾಂತ್ರಿಕ ವಿದ್ಯಾರ್ಥಿಗಳ ಪ್ರತಿಭಟನೆ

ಬೆಂಗಳೂರು, ಏ, 15, – ಬೆಂಗಳೂರು ತಾಂತ್ರಿಕ ಸಂಸ್ಥೆಯ ವಿದ್ಯಾರ್ಥಿಗಳ ಸಂಘ ಗೋಕಾಕ್ ವರದಿಯನ್ನು ಬೆಂಬಲಿಸಿ ಏಪ್ರಿಲ್ 19 ರಂದು ಸಾಂಕೇತಿಕ ಮುಷ್ಕರ ನಡೆಸಲಿದ್ದಾರೆ.

ಏಪ್ರಿಲ್ 20 ನೇ ದಿನಾಂಕ ದೊಳಗೆ ಗೋಕಾಕ್ ವರದಿಯನ್ನು ಒಪ್ಪಿಕೊಳ್ಳದೇ ಹೋದರೆ ಅಂದು [illegible] ವಿಧಾನ ಸೌಧದ ಎದುರಿಗೆ [illegible] ಸಂಘದ [illegible] ಹೇಳಿಕೆಯಲ್ಲಿ ತಿಳಿಸಿದ್ದಾರೆ.

Jana Vani

April 16' 82

13

ಗೋಕಾಕ್ ವರದಿ: ಪ್ರಮುಖರ ಬೆಂಬಲ

ಬೆಂಗಳೂರು, ಏ. ೧೫. ನಾಲ್ಕು ಕೋಟಿ ಕನ್ನಡಿಗರ ಏಳಿಗೆಯ ಸಲುವಾಗಿ ಗೋಕಾಕ್ ವರದಿಯ ಜಾರಿಗಾಗಿ ನಾನು ಯಾವುದೇ ರೀತಿಯ ತ್ಯಾಗಕ್ಕೂ ಸಿದ್ಧ ಎಂದು ಪ್ರಾಸಕ್ತ ಪ್ರೊ|| ಎಸ್. ಎಸ್. ಅರಕೇರಿಯವರು ಇಂದು ಹೇಳಿಕೆ ನೀಡಿ, ವರದಿಯ ಜಾರಿಗಾಗಿ ನಡೆಸುತ್ತಿರುವ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ.

ಸರಕಾರಿ ನೆರವು ಪಡೆಯುತ್ತಿರುವ ಕರ್ನಾಟಕದ ಖಾಸಗಿ ಶಾಲೆಗಳ ಸಿಬ್ಬಂದಿ ಸಂಘದ ಅಧ್ಯಕ್ಷರೂ ಆಗಿರುವ ಪ್ರೊ|| ಅರಕೇರಿಯವರು "ಗೋಕಾಕ್ ವರದಿಯು ಯಾವುದೇ ಭಾಷೆಗೆ ಅಡ್ಡಿಯಾಗಿಲ್ಲ. ಅದರ ಶೀಘ್ರ ಜಾರಿ ಅಗತ್ಯ" ಎಂದೂ ತಿಳಿಸಿದ್ದಾರೆ.

ಸುರಾಜ್ಯ ಪಕ್ಷದ ಬೆಂಬಲ

ಸುರಾಜ್ಯ ಪಕ್ಷದ ಅಧ್ಯಕ್ಷ ಶ್ರೀ ಕೆ. ಕೆ. ಮಿಶ್ರಾರವರು ಪತ್ರಿಕಾ ಹೇಳಿಕೆಯೊಂದನ್ನಿತ್ತು ಎಲ್ಲ ರಂಗಗಳಲ್ಲಿಯೂ ಶೋಷಣೆಗೊಳಗಾಗುತ್ತಿರುವ ಕನ್ನಡಿಗರು [illegible] ಗಾಢ ನಿದ್ರೆಯಿಂದ ಎಚ್ಚೆತ್ತು ಹೋರಾಡಲು ಮುಂದೆ ಬಂದಿರುವುದಕ್ಕಾಗಿ ಅಭಿನಂದನೆ ವ್ಯಕ್ತಪಡಿಸಿ, ತಡವಿಲ್ಲದೆ ಗೋಕಾಕ್ ವರದಿಯನ್ನು ಜಾರಿಗೊಳಿಸಲು ಒತ್ತಾಯಿಸಿದ್ದಾರೆ.

ರೇಣುಕಾ ಪ್ರಸಾದರ ಬೆಂಬಲ

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರಾದ ಎಚ್. ಎಸ್. ರೇಣುಕಾ ಪ್ರಸಾದ್ ಅವರು ಪತ್ರಿಕಾ ಹೇಳಿಕೆ

(೪ನೇ ಪುಟದ ೫ನೇ ಕಾಲಂ ನೋಡಿ)

ಪ್ರಮುಖರ ಬೆಂಬಲ

(ಒಂದನೇ ಪುಟದಿಂದ)

ಯನ್ನಿತ್ತು ಗೋಕಾಕ್ ವರದಿಯನ್ನು ಕೂಡಲೇ ಜಾರಿಗೆ ತರಲು ರಾಜ್ಯ ಸರಕಾರವನ್ನು ಒತ್ತಾಯಿಸಿದ್ದಾರೆ. ಈ ಕುರಿತು ನಡೆಯುತ್ತಿರುವ ಚಳವಳಿಗೆ ತಮ್ಮ ಸಂಪೂರ್ಣ ಸಹಕಾರವಿದೆಯೆಂತಲೂ ಅವರು ತಿಳಿಸಿದ್ದಾರೆ.

ಗೋಕಾಕ್ ವರದಿ ಜಾರಿಗೆ ಒತ್ತಾಯಿಸಿ ಸರದಿ ಉಪವಾಸವನ್ನು ನಡೆಸುತ್ತಿರುವ ಸಾಹಿತಿ ಕಲಾವಿದರಿಗೆ ಯಲಹಂಕದ ಕಸ್ತೂರಿ ಕನ್ನಡ ಕಲಾವೃಂದ ಪೂರ್ಣ ಬೆಂಬಲ ನೀಡಲಿವೆ ಎಂದು ಕಲಾವೃಂದದ ಕಾರ್ಯದರ್ಶಿ ಎನ್. ಸಿ. ರಮೇಶ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಶಾಸಕರ ಮನೆ ಮುಂದೆ ಧರಣಿ

ಗೋಕಾಕ್ ವರದಿ ವಿಳಂಬವನ್ನು ಕಂಡರೂ ಮೌನವಾಗಿರುವ ನಗರದ ಎಲ್ಲಾ ಶಾಸಕರ ಮನೆ ಮುಂದೆ 'ಸರದಿ ನಿರಶನ'ವನ್ನು ಮಾಡಲು ಗೋಕಾಕ್ ವರದಿ ಹೋರಾಟ ಸಮಿತಿಯು ಉದ್ದೇಶಿಸಿಕೊಂಡಿದೆ ಎಂದು ಸಮಿತಿ ಪ್ರಧಾನ ಕಾರ್ಯದರ್ಶಿ ಪಿ. ಎಸ್. ಪ್ರಕಾಶ್ ಅವರು ತಿಳಿಸಿದ್ದಾರೆ. ಇದರ ಅಂಗವಾಗಿ ಪ್ರಥಮತಃ ನಾಳೆ ಜನತಾ ಶಾಸಕ ಪಿ. ರಾಮದೇವ್ ಅವರ ಮನೆ ಮುಂದೆ ನಿರಶನ ಹೂಡಲಿರುವುದಾಗಿ ತಿಳಿಸಿದ್ದಾರೆ.

ಬೆಂಗಳೂರು ತಾಂತ್ರಿಕ ಸಂಸ್ಥೆ (ಬಿ. ಐ. ಟಿ) ಯ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಎ. ಪಿ. ಕೃಷ್ಣ ಅವರು ಪತ್ರಿಕಾ ಹೇಳಿಕೆಯನ್ನಿತ್ತು ಏ. ೧೯ರಂದು ಸಾಂಕೇತಿಕ ಮುಷ್ಕರವನ್ನು ಹೂಡಲಿರುವುದಾಗಿ ತಿಳಿಸಿದ್ದಾರೆ. ನಂತರ ಏ. ೨೦ರಂದು ವಿಧಾನಸೌಧಕ್ಕೆ ಮೆರವಣಿಗೆಯಲ್ಲಿ ತೆರಳಲಿರುವುದಾಗಿಯೂ ತಿಳಿಸಿದ್ದಾರೆ.